# ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ ಬಾಗಲಕೋಟ

ಸಂ:ಆಡಳಿತ/ಸಿಬ್ಬಂದಿ/ನೇಮಕಾತಿ/ 4851 /2018

ಬಾಗಲಕೋಟ:ದಿನಾಂಕ: 11-12-2018

## ನೇಮಕಾತಿ ಪ್ರಕಟಣೆ

ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ ಬಾಗಲಕೋಟ ಇದರಲ್ಲಿ ಖಾಲಿಯಿರುವ ಈ ಕೆಳ ಕಂಡ 80 ವಿವಿಧ ಹುದ್ದೆಗಳನ್ನು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಬ್ಯಾಂಕಿನ ಕಛೇರಿಯ ವೇಳೆಯಲ್ಲಿ ದಿನಾಂಕ: 12-12-2018 ರಿಂದ ಪೂರೈಸಲಾದ ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಬ್ಯಾಂಕಿಗೆ ದಿನಾಂಕ: 05-01-2019 ರ ಸಾಯಂಕಾಲ 5.00 ಘಂಟೆ ಒಳಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ನೇಮಕಾತಿ ಉದ್ದೇಶಿಸಿದ 80 ವಿವಿಧ ಹುದ್ದೆಗಳನ್ನು ಸಹಕಾರ ಇಲಾಖೆಯ ಆದೇಶ ಸಂಖ್ಯೆ ಆರ್‌ಸಿಎಸ್/ಸಿಆರಡಿ/ಕೆಎಂಸಿ-4/21/2018-19 ದಿನಾಂಕ: 13-11-2018 ರನುಸಾರ ಈ ಕೆಳಕಂಡಂತೆ ಸರ್ಕಾರದ ರೋಷ್ಟರ್ ಮೀಸಲಾತಿ ನಿಯಮಾನುಸಾರ ವರ್ಗೀಕರಿಸಿ ಕರೆಯಲಾಗಿದೆ.

| ಅ ನಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವರ್ಗಗಳ ವಿವರ | ಒಳ ಮೀಸಲಾತಿ | | | | | | | | ಒಟ್ಟು |
|---|---|---|---|---|---|---|---|---|---|---|---|---|
| | | | | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜೀ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರ | ಅಂಗ ವಿಕಲರು | ಅಂಗ ವಿಕಲರು (ದೃಷ್ಟಿಮಾಂ) | |
| 1 | ತಾಂತ್ರಿಕ ಹುದ್ದೆಗಳು (ಸಾಫ್ಟ್‌ವೇರ್ ಇಂಜನೀಯರ್ಸ್) | 02 | ಸಾಮಾನ್ಯ | – | 01 | – | – | – | – | – | – | 01 |
| | | | ಪರಿಶಿಷ್ಟ ಪಂಗಡ | 01 | – | – | – | – | – | – | – | 01 |
| | | | ಒಟ್ಟು | 01 | 01 | – | – | – | – | – | – | 02 |
| 2 | ಗಣಕಯಂತ್ರ ಸಂಯೋಜಕರು | 06 | ಸಾಮಾನ್ಯ | 01 | 01 | 01 | – | – | – | – | – | 03 |
| | | | ಪರಿಶಿಷ್ಟ ಜಾತಿ | 01 | – | – | – | – | – | – | – | 01 |
| | | | ಪರಿಶಿಷ್ಟ ಪಂಗಡ | 01 | – | – | – | – | – | – | – | 01 |
| | | | ಪ್ರ ವರ್ಗ-1 | 01 | – | – | – | – | – | – | – | 01 |
| | | | ಒಟ್ಟು | 04 | 01 | 01 | – | – | – | – | – | 06 |
| 3 | ದ್ವಿತೀಯ ದರ್ಜೆ ಸಹಾಯಕರು | 44 | ಸಾಮಾನ್ಯ | 03 | 08 | 06 | 02 | 01 | 01 | – | 01 | 22 |
| | | | ಪರಿಶಿಷ್ಟ ಜಾತಿ | 01 | 03 | 02 | – | – | – | – | 01 | 07 |
| | | | ಪರಿಶಿಷ್ಟ ಪಂಗಡ | – | 01 | – | – | – | – | – | – | 01 |
| | | | ಪ್ರ ವರ್ಗ-1 | – | 01 | – | – | – | – | – | – | 01 |
| | | | ಪ್ರ ವರ್ಗ-2ಎ | 01 | 03 | 02 | – | – | – | – | 01 | 07 |
| | | | ಪ್ರ ವರ್ಗ-2ಬಿ | 01 | 01 | – | – | – | – | – | – | 02 |
| | | | ಪ್ರ ವರ್ಗ-3ಎ | 01 | 01 | – | – | – | – | – | – | 02 |
| | | | ಪ್ರ ವರ್ಗ-3ಬಿ | 01 | 01 | – | – | – | – | – | – | 02 |
| | | | ಒಟ್ಟು | 08 | 19 | 10 | 02 | 01 | 01 | – | 03 | 44 |
| 4 | ವಾಹನ ಚಾಲಕರು | 02 | ಸಾಮಾನ್ಯ | – | 01 | – | – | – | – | – | – | 01 |
| | | | ಪರಿಶಿಷ್ಟ ಪಂಗಡ | 01 | – | – | – | – | – | – | – | 01 |
| | | | ಒಟ್ಟು | 01 | 01 | – | – | – | – | – | – | 02 |
| 5 | ಸಿಪಾಯಿ | 26 | ಸಾಮಾನ್ಯ | 03 | 04 | 03 | 01 | 01 | – | 01 | – | 13 |
| | | | ಪರಿಶಿಷ್ಟ ಜಾತಿ | 01 | 01 | – | 01 | – | 01 | – | – | 04 |
| | | | ಪ್ರ ವರ್ಗ-1 | – | – | 01 | – | – | – | – | – | 01 |
| | | | ಪ್ರ ವರ್ಗ-2ಎ | 01 | 01 | 01 | 01 | – | 01 | – | – | 05 |
| | | | ಪ್ರ ವರ್ಗ-2ಬಿ | – | 01 | – | – | – | – | – | – | 01 |
| | | | ಪ್ರ ವರ್ಗ-3ಎ | – | 01 | – | – | – | – | – | – | 01 |
| | | | ಪ್ರ ವರ್ಗ-3ಬಿ | – | – | 01 | – | – | – | – | – | 01 |
| | | | ಒಟ್ಟು | 05 | 08 | 06 | 03 | 01 | 02 | 01 | – | 26 |
| | | 80 | ಅಂತೂ ಒಟ್ಟು | 19 | 30 | 17 | 05 | 02 | 03 | 01 | 03 | 80 |

## 2. ವೇತನ ಶ್ರೇಣಿ:

| | |
|---|---|
| 1) ತಾಂತ್ರಿಕ ಹುದ್ದೆಗಳು (ಸಾಫ್ಟ್‌ವೇರ್ ಇಂಜನೀಯರ್ಸ್) | 21600-600-24600-700-28800-800-33600-900-39000-1050-40050. |
| 2) ಗಣಕಯಂತ್ರ ಸಂಯೋಜಕರು | 20000-500-21000-600-24600-700-28800-800-33600-900-36300. |
| 3) ದ್ವಿತೀಯ ದರ್ಜೆ ಸಹಾಯಕರು | 17650-450-19000-500-21000-600-24600-700-28800-800-32000. |
| 4) ವಾಹನ ಚಾಲಕರು | 17650-450-19000-500-21000-600-24600-700-28800-800-32000. |
| 5) ಸಿಪಾಯಿ | 14550-350-15600-400-17200-450-19000-500-21000-600-24600-700-26700 |

ಮತ್ತು ನಿಯಮಾನುಸಾರ ತುಟ್ಟಿ ಭತ್ಯೆ ಹಾಗೂ ಇತರ ಭತ್ಯೆಗಳನ್ನು ನೀಡಲಾಗುವದು.



Scanned by CamScanner

**3. ವಿದ್ಯಾರ್ಹತೆ:**

| | | |
|---|---|---|
| 1 | ತಾಂತ್ರಿಕ ಹುದ್ದೆಗಳು (ಸಾಫ್ಟ್‌ವೇರ್ ಇಂಜನೀಯರ್ಸ್) | ಸರ್ಕಾರದ ಅಥವಾ ಅಧಿಕೃತವಾಗಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ **ಬಿ.ಇ./ಬಿ.ಟೆಕ್, ಕಂಪ್ಯೂಟರ ಸಾಯನ್ಸ್/ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್, ಎಮ್.ಸಿ.ಎ, ಎಮ್.ಎಸ್.ಸಿ ಕಂಪ್ಯೂಟರ ಸಾಯನ್ಸ್** ದಲ್ಲಿ ಕನಿಷ್ಠ ಶೇ. 60% ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಪರಿಶಿಷ್ಟ ಪಂಗಡ ಅಭ್ಯರ್ಥಿ ಕನಿಷ್ಟ 55% ಅಂಕ ಪಡೆದಿರಬೇಕು. ಪದವಿಯ ಎಲ್ಲಾ ಅಂಕ ಪಟ್ಟಿಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು ಹಾಗೂ ಬ್ಯಾಂಕಿಂಗ್ ಸಿಬಿಎಸ್ ತಂತ್ರಾಂಶಕ್ಕೆ ಸಂಬಂಧಿಸಿದ ಕನಿಷ್ಠ 3 ವರ್ಷ ತಾಂತ್ರಿಕ ಸಲಹೆಗಾರರಾಗಿ ಪ್ರತಿಷ್ಠಿತ ಸಂಸ್ಥೆಯ ಅನುಭವ ಪತ್ರ ಲಗತ್ತಿಸಬೇಕು ಮತ್ತು ಜಾವಾ ಭಾಷೆ ಹಾಗೂ ಒರ್‍ಯಾಕಲ್ ಜ್ಞಾನ ಹೊಂದಿರಬೇಕು. |
| 2 | ಗಣಕಯಂತ್ರ ಸಂಯೋಜಕರು | ಸರ್ಕಾರದ ಅಥವಾ ಅಧಿಕೃತವಾಗಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ **ಬಿ.ಇ. / ಬಿ.ಟೆಕ್, ಕಂಪ್ಯೂಟರ ಸಾಯನ್ಸ್ /ಎಲೆಕ್ಟ್ರಾನಿಕ್ಸ್&ಕಮ್ಯುನಿಕೇಷನ್, ಬಿ.ಸಿ.ಎ, ಬಿ.ಎಸ್.ಸಿ ಕಂಪ್ಯೂಟರ ಸಾಯನ್ಸ್** ಯಲ್ಲಿ ಕನಿಷ್ಟ ಶೇ. 60% ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರ ವರ್ಗ-1 ಅಭ್ಯರ್ಥಿಗಳಿಗೆ ಕನಿಷ್ಟ 55% ಅಂಕ ಪಡೆದಿರಬೇಕು. ವಿದ್ಯಾರ್ಹತೆಯ ಬಗ್ಗೆ ಎಲ್ಲಾ ಅಂಕ ಪಟ್ಟಿಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು. ಕನಿಷ್ಟ 2 ವರ್ಷ ಗಣಕತಂತ್ರ ಸಂಯೋಜಕರಾಗಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವದು. |
| 3 | ದ್ವಿತೀಯ ದರ್ಜೆ ಸಹಾಯಕರು | ಕರ್ನಾಟಕ ಸರ್ಕಾರದ ಅಂಗೀಕೃತ ವಿಶ್ವ ವಿದ್ಯಾಲಯದಿಂದ **ಬಿ.ಎಸ್.ಸಿ, ಬಿ.ಸಿ.ಎ, ಬಿ.ಕಾಂ, ಬಿ.ಬಿ.ಎ, ಬಿ.ಬಿ.ಎಮ್, ಬಿ.ಎಸ್.ಸಿ(ಅಗ್ರಿ)** ದಲ್ಲಿ ಕನಿಷ್ಟ ಶೇ 60% ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳು ಕನಿಷ್ಟ 55% ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಕಂಪ್ಯೂಟರ ತರಬೇತಿ ಜ್ಞಾನ ಹೊಂದಿರಬೇಕು ಹಾಗೂ ಸಹಕಾರ ವಿಷಯದಲ್ಲಿ ಸ್ನಾತಕೋತ್ತರ ಪದವಿ/ಡಿಪ್ಲೊಮಾ ಪಡೆದವರಿಗೆ ಆದ್ಯತೆ ನೀಡಲಾಗುವದು. ವಿದ್ಯಾರ್ಹತೆಯ ಬಗ್ಗೆ ಪದವಿಯ ಎಲ್ಲಾ ಅಂಕ ಪಟ್ಟಿಯನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು. |
| 4 | ವಾಹನ ಚಾಲಕರು | **ಎಸ್.ಎಸ್.ಎಲ್.ಸಿ** ಪಾಸಾಗಿರಬೇಕು. ಭಾರಿ ವಾಹನ ಚಾಲನೆಯ ಅಧಿಕೃತ ಲೈಸೆನ್ಸ್ ಹಾಗೂ 5 ವರ್ಷ ಅನುಭವ ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು. ವಿದ್ಯಾರ್ಹತೆಯ ಬಗ್ಗೆ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು. |
| 5 | ಸಿಪಾಯಿ | **ಎಸ್.ಎಸ್.ಎಲ್.ಸಿ** ಯಲ್ಲಿ ಕನಿಷ್ಟ ಶೇ. 60% ಅಂಕಗಳೊಂದಿಗೆ ಪಾಸಾಗಿರಬೇಕು. ಪರಿಶಿಷ್ಟ ಜಾತಿ, ಪ್ರವರ್ಗ-1 ಅಭ್ಯರ್ಥಿಗಳು ಕನಿಷ್ಟ 55% ಅಂಕ ಪಡೆದಿರಬೇಕು. ವಿದ್ಯಾರ್ಹತೆಯ ಬಗ್ಗೆ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸಬೇಕು. |

**4. ವಯೋಮಿತಿ:**

ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ರೀತ್ಯಾ ಈ ಕೆಳಕಂಡ ಗರೀಷ್ಟ ವಯೋಮಿತಿಗೊಳಪಟ್ಟಿರಬೇಕು.

ఎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರ ವರ್ಗ-1 ಅಭ್ಯರ್ಥಿಗಳಿಗೆ – 40 ವರ್ಷಗಳು

ಬಿ) ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗೆ – 38 ವರ್ಷಗಳು

ಸಿ) ಸಾಮಾನ್ಯ ವರ್ಗದ ಅಭ್ಯರ್ಥಿಗೆ – 35 ವರ್ಷಗಳು

ಡಿ) ಮಾಜಿ ಸೈನಿಕ ಅಭ್ಯರ್ಥಿಗೆ ಭಾರತ ಶಸಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರಬೇಕು ಹಾಗೂ 45 ವರ್ಷ ಮೀರಿರಬಾರದು ಮತ್ತು ಕನಿಷ್ಟ ಅಂಕಗಳು ಅನ್ವಯಿಸುವದಿಲ್ಲ.

ಇ) ವಿಧವೆ ಅಭ್ಯರ್ಥಿಗೆ ಗರೀಷ್ಟ ವಯೋಮಿತಿ ಮೇಲ್ಕಂಡಂತೆ ನಿಗಧಿಪಡಿಸಿರುವ ವಯೋಮಿತಿಗೆ 10 ವರ್ಷ ಸೇರಿಸಿ ಪರಿಗಣಿಸಲಾಗುವದು.

**5. ಆಯ್ಕೆ ವಿಧಾನ:**

**ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ.**

**i) ಕಂಪ್ಯೂಟರ್ ಇಂಜನೀಯರ (ಸಾಫ್ಟ್‌ವೇರ್) ಹುದ್ದೆಗೆ:**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ-50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ-25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-25 ಅಂಕಗಳು, ಕಂಪ್ಯೂಟರ್/ ಮಾಹಿತಿ ತಂತ್ರಜ್ಞಾನ/ಬ್ಯಾಂಕಿಂಗ್ ತಂತ್ರಜ್ಞಾನ ಪರೀಕ್ಷೆ-75 ಅಂಕಗಳು ಮತ್ತು ಭಾರತ ಸಂವಿಧಾನಕ್ಕೆ-25 ಅಂಕಗಳನ್ನು ಒಳಗೊಂಡಿರುತ್ತದೆ.

**ii) ಗಣಕಯಂತ್ರ ಸಂಯೋಜಕರ ಹುದ್ದೆಗೆ:**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ-50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ-25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-25 ಅಂಕಗಳು, ಕಂಪ್ಯೂಟರ್/ ಮಾಹಿತಿ ತಂತ್ರಜ್ಞಾನ/ಬ್ಯಾಂಕಿಂಗ್ ತಂತ್ರಜ್ಞಾನ ಪರೀಕ್ಷೆ-75 ಅಂಕಗಳು ಮತ್ತು ಭಾರತ ಸಂವಿಧಾನಕ್ಕೆ-25 ಅಂಕಗಳನ್ನು ಒಳಗೊಂಡಿರುತ್ತದೆ.

**iii) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ:**



Scanned by CamScanner

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ–50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ–25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ–25 ಅಂಕಗಳು, ಸಹಕಾರಿ ವಿಷಯಕ್ಕಾಗಿ–50 ಅಂಕಗಳು, ಭಾರತ ಸಂವಿಧಾನಕ್ಕೆ–25 ಅಂಕಗಳು, ಮತ್ತು ವಸ್ತುನಿಷ್ಠ ವಿಷಯಗಳಿಗೆ–25 ಅಂಕಗಳನ್ನು ಒಳಗೊಂಡಿರುತ್ತದೆ.

**iv) ವಾಹನ ಚಾಲಕ ಹುದ್ದೆಗೆ:**

ವಾಹನ ಚಾಲಕರ ಹುದ್ದೆಗೆ ನೇರವಾಗಿ 1:5 ಅನುಪಾತದಲ್ಲಿ ಸಂದರ್ಶನ ಕರೆಯಲಾಗುವುದು. ಸಂದರ್ಶನ ವೇಳೆಯಲ್ಲಿ ವಾಹನ ಚಾಲನೆಯ ಪರೀಕ್ಷೆ ನಡೆಸಲಾಗುವದು.

**v) ಸಿಪಾಯಿ ಹುದ್ದೆಗೆ:**

100 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ–50 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ–50 ಅಂಕಗಳನ್ನು ಒಳಗೊಂಡಿರುತ್ತದೆ.

ಈ ಮೇಲಿನ ಎಲ್ಲಾ ಹುದ್ದೆಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಿಪಾಯಿ ಹಾಗೂ ವಾಹನ ಚಾಲಕ ಹುದ್ದೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಹುದ್ದೆಗಳಿಗೆ ಕಂಪ್ಯೂಟರ ಪ್ರವೀಣತಾ ಪರೀಕ್ಷೆ ನಡೆಸಲಾಗುವದು.

**6. ಅರ್ಜಿ ಶುಲ್ಕ:**

(ಅ) ಬ್ಯಾಂಕಿನ ಕೇಂದ್ರ ಕಛೇರಿ ಸೆಕ್ಟರ ನಂ: 24 ನವನಗರ ಹಾಗೂ ಜಮಖಂಡಿ ಎಪಿಎಂಸಿ ಶಾಖೆಯ ಕಛೇರಿ ವೇಳೆಯಲ್ಲಿ ದಿನಾಂಕ: 12–12–2018 ರಿಂದ 05–01–2019 ರ ವರೆಗಿನ ಅವಧಿಯಲ್ಲಿ ಅರ್ಜಿ ಶುಲ್ಕ ಜಿಎಸ್‌ಟಿ ಸೇರಿ ರೂ: 1000–00 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರ ವರ್ಗ–1, ಅಂಗವಿಕಲರು, ಮತ್ತು ಮಾಜೀ ಸೈನಿಕ ಅಭ್ಯರ್ಥಿಗಳಿಗೆ ಜಿಎಸ್‌ಟಿ ಸೇರಿ ರೂ: 500–00 ಗಳನ್ನು ಭರಣಾ ಮಾಡಿ ಅರ್ಜಿ ಪಡೆಯಬಹುದು. ಈ ಹಣವನ್ನು ಯಾವದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವದಿಲ್ಲ.

(ಬ) ಅರ್ಜಿಯನ್ನು ಖುದ್ದಾಗಿ ಬಂದು ಪಡೆಯದೆ ಇರುವವರು ನಿಗಧಿಪಡಿಸಿದ ಅರ್ಜಿ ನಮೂನೆಯನ್ನು ಬ್ಯಾಂಕಿನ **ವೆಬಸೈಟಿನಿಂದ (www.bgkdccbank.com) ಡೌನಲೋಡ** ಮಾಡಿಕೊಳ್ಳಬಹುದು ಅಂತವರು ಮೇಲಿನಂತೆ ಅರ್ಜಿ ಶುಲ್ಕವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನವನಗರ ಈ ಹೆಸರಿನಲ್ಲಿ ಕ್ರಾಸ ಮಾಡಿದ ಡಿಮಾಂಡ ಡ್ರಾಫ್ಟನ್ನು ಅರ್ಜಿ ಜೊತೆ ಲಗತ್ತಿಸಬೇಕು.

**7. ಅರ್ಜಿ ಸಲ್ಲಿಸುವ ವಿಧಾನ:**

1) ಬ್ಯಾಂಕಿನಿಂದ ಪೊರೈಸಿದ ಮೂಲ ಅರ್ಜಿಯಲ್ಲಿ ಭರ್ತಿ ಮಾಡಿ ಅಗತ್ಯ ಅರ್ಜಿ ಸಲ್ಲಿಸತಕ್ಕದ್ದು ಅಥವಾ ವೆಬ್‌ಸೈಟ ಮುಖಾಂತರ ಪಡೆದ ಅರ್ಜಿಗೆ ಡಿಡಿ ಲಗತ್ತಿಸಿ ಸಲ್ಲಿಸತಕ್ಕದ್ದು.
2) ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತದೆ ಎಂಬುವದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು.
3) ಅರ್ಜಿಯನ್ನು **ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ಸೆಕ್ಟರ ನಂ: 24 ನವನಗರ ಬಾಗಲಕೋಟ–587 103** ಇವರ ಕಛೇರಿಗೆ ಸಲ್ಲಿಸುವದು.
4) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 05–01–2019 ರ ಸಾಯಂಕಾಲ 5.00 ಘಂಟೆವರೆಗೆ ಮಾತ್ರ ಇರುತ್ತದೆ.
5) ಅರ್ಜಿಯಲ್ಲಿ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು.
6) ಅಭ್ಯರ್ಥಿಗೆ ಕನ್ನಡ ಭಾಷಾ ಪರಿಜ್ಞಾಣ ಅವಶ್ಯ.
7) ಅರ್ಹ ಅಭ್ಯರ್ಥಿಗಳಿಗೆ 1:10 ಅನುಪಾತದಲ್ಲಿ ಲಿಖಿತ ಪರೀಕ್ಷೆ ಕರೆಯಲಾಗುವದು ಅಂಥವರು ಲಿಖಿತ ಪರೀಕ್ಷೆಗೆ ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು. ಲಿಖಿತ ಪರೀಕ್ಷೆಯ ವೇಳೆ, ದಿನಾಂಕ, ಮತ್ತು ಸ್ಥಳದ ವಿವರವನ್ನು ಪ್ರತ್ಯೇಕವಾಗಿ ತಿಳಿಸಲಾಗುವದು.

**8. ಈ ಕೆಳಗಿನ ದಾಖಲಾತಿಗಳನ್ನು ಅಭ್ಯರ್ಥಿಗಳು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಝರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.**

1) ಸ್ವ–ಹಸ್ತಾಕ್ಷರವಿರುವ ಪಾಸಪೋರ್ಟ ಅಳತೆಯ ಭಾವಚಿತ್ರ ಅಂಟಿಸಬೇಕು.
2) ವಯಸ್ಸು ದೃಢೀಕರಣ ಕುರಿತು ಎಸ್. ಎಸ್. ಎಲ್. ಸಿ. ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ ಲಗತ್ತಿಸಬೇಕು.
3) ವಿದ್ಯಾರ್ಹತೆಗೆ ಸಂಬಂಧಪಟ್ಟ ವಿವಿಧ ಹುದ್ದೆ ಹಾಗೂ ಆಯಾ ಪದವಿಗಳ ಅಂಕಪಟ್ಟಿ ಸಲ್ಲಿಸಬೇಕು.
4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಹಾಗೂ ಇನ್ನಿತರ ಮೀಸಲಾತಿ ಸೌಲಭ್ಯ ಪಡೆಯಲ್ಲಿಚ್ಚಿಸುವ ಅಭ್ಯರ್ಥಿಗಳು ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧೀಕಾರದಿಂದ ದೃಢೀಕರಣ ಪಡೆದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರಪಡಿಸತಕ್ಕದ್ದು. ಪ್ರ ವರ್ಗ–2ಎ, 2ಬಿ, 3ಎ, & 3ಬಿ ಅಭ್ಯರ್ಥಿಗಳು ನಮೂನೆ "ಎಫ್" ನಲ್ಲಿ ಸಂಬಂಧಿಸಿದ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಮಾಣಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಬ್ಯಾಂಕು ಪರಿಶೀಲನೆಗಾಗಿ ಕೇಳಿದಾಗ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.



Scanned by CamScanner

5) **ಗ್ರಾಮೀಣ ಅಭ್ಯರ್ಥಿ:** ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದು ದೃಢೀಕರಿಸಿ ಲಗತ್ತಿಸತಕ್ಕದ್ದು.

6) **ಕನ್ನಡ ಮಾಧ್ಯಮ ಅಭ್ಯರ್ಥಿ:** ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದು ದೃಢೀಕರಿಸಿ ಲಗತ್ತಿಸತಕ್ಕದ್ದು.

7) **ಯೋಜನಾ ನಿರಾಶ್ರಿತರು:** ಸರ್ಕಾರದ ಆದೇಶದ ಅನುಸಾರ ಯೋಜನಾ ನಿರಾಶ್ರಿತರ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಪಡೆದು ದೃಢೀಕರಿಸಿ ಲಗತ್ತಿಸತಕ್ಕದ್ದು.

8) **ಮಾಜಿ ಸೈನಿಕ ಅಭ್ಯರ್ಥಿ:** ಮಾಜಿ ಸೈನಿಕ ಅಂದರೆ ಭೂ–ಧಳ, ನೌಕಾ–ದಳ, ಮತ್ತು ವಾಯು–ದಳದಲ್ಲಿ ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಇವರು ಸರ್ಕಾರದ ಜಾರಿಯಲ್ಲಿರುವ ನಿಯಮಗಳನ್ವಯ ಮಾಜಿ ಸೈನಿಕ ಪ್ರಮಾಣ ಪತ್ರವನ್ನು ಪಡೆದು ದೃಢೀಕರಿಸಿ ಲಗತ್ತಿಸತಕ್ಕದ್ದು.

9) **ಅಂಗವಿಕಲ ಅಭ್ಯರ್ಥಿ:** ಸರ್ಕಾರದ ಅಧಿಸೂಚನೆಯಲ್ಲಿ ಆದೇಶಿಸಿದಂತೆ ಅಂಗವಿಕಲರಿಗೆ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಪಡೆದು ದೃಢೀಕರಿಸಿ ಲಗತ್ತಿಸತಕ್ಕದ್ದು.

**9. ಇತರೆ ನಿಯಮಗಳು.**

1) ಪೂರ್ಣ ವಿವರಗಳನ್ನು ಸಲ್ಲಿಸದ, ಸ್ಪಷ್ಟವಾಗಿ ಬರೆಯದ ಅಪೂರ್ಣವಿದ್ದ ಸಹಿ ಮಾಡದೆ ಇರುವ, ಅವಶ್ಯ ದಾಖಲಾತಿಗಳನ್ನು ಲಗತ್ತಿಸದ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವದು.
2) ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳು ಹಾಗೂ ಆದೇಶಕ್ಕೆ ಒಳಪಟ್ಟಿರುತ್ತದೆ.
3) ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಮೀಸಲಿರಿಸಿದ ವರ್ಗಗಳಲ್ಲಿ ಸಮತಳ ಮೀಸಲಾತಿಗಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಅದೇ ವರ್ಗಕ್ಕೆ ಸೇರಿದ ಇತರೇ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
4) ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
5) ಯಾವುದೇ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ ಕರೆ ಬಂದಿಲ್ಲವೆಂದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು. ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
6) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರಿಕ್ಷಾರ್ಥ ಸೇವೆಯಲ್ಲಿ ಇರಬೇಕಾಗುವದು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕು ಸೂಚಿಸಲ್ಪಟ್ಟಂತಹ ಭದ್ರತೆಯೊಂದಿಗೆ ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು.
7) ಒಂದಕ್ಕಿಂತ ಹೆಚ್ಚಿನ ಬೇರೆ ಬೇರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಡಿಡಿಯೊಂದಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವದು.
8) ಲಿಖಿತ ಪರೀಕ್ಷೆ ಕರೆಯೊಲೆ ಮುಟ್ಟದಿದ್ದಲ್ಲಿ/ ಯಾವದೇ ಕಾರಣಕ್ಕಾಗಿ ತಲುಪದಿದ್ದಲ್ಲಿ ಬ್ಯಾಂಕು ಹೊಣೆಗಾರ ಇರುವದಿಲ್ಲ.

ಸ್ಥಳ : ಬಾಗಲಕೋಟೆ

ದಿನಾಂಕ: 11–12–2018

**ಸಹಿ/–**
**ಸದಸ್ಯ ಕಾರ್ಯದರ್ಶಿ**
**ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ.**
**ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ.,**
**ಬಾಗಲಕೋಟೆ.**

Scanned by CamScanner